ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2019–20 ದಿನಾಂಕ: 31–07–2019

# ಪತ್ರಿಕಾ ಪ್ರಕಟಣೆ

## ಬಡ್ತಿ ಹಾಗೂ ವರ್ಗಾವಣೆಗೆ ಸಂಬಂಧಿಸಿದ ಮನವಿಗಳನ್ನು ನಿಯಮಾವಳಿಗಳ ಚೌಕಟ್ಟಿನಲ್ಲಿ ಪರಿಶೀಲಿಸಿ ಸಕಾರಾತ್ಮಕವಾಗಿ ಸ್ಪಂದಿಸುವೆ : ಎನ್ ಭೃಂಗೀಶ್

ಬೆಂಗಳೂರು, ಜುಲೈ 31 ( ಕರ್ನಾಟಕ ವಾರ್ತೆ) :

ಬಡ್ತಿ ಹಾಗೂ ವರ್ಗಾವಣೆಗೆ ಸಂಬಂಧಿಸಿದಂತೆ ಸ್ವೀಕೃತವಾಗುವ ಮನವಿಗಳನ್ನು ನಿಯಮಾವಳಿಗಳ ಚೌಕಟ್ಟಿನಲ್ಲಿ ಪರಿಶೀಲಿಸಿ ಸಕಾರಾತ್ಮಕವಾಗಿ ಸ್ಪಂದಿಸುವುದಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಎನ್ ಭೃಂಗೀಶ್ ಅವರು ಪ್ರಕಟಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ಸುಮಾರು ಮೂರು ದಶಕಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಪ ನಿರ್ದೇಶಕ ಪಿ ಎಂ ಚಂದ್ರಮೌಳೀಶ್ವರ ಸ್ವಾಮಿ ಅವರ ಗೌರವಾರ್ಥ ಇಲಾಖೆಯ ಅಧಿಕಾರಿ ಮತ್ತು ನೌಕರರ ಸಂಘ ಹಾಗೂ ಸಾಲ ಸಹಕಾರ ಸಂಘ ಆಯೋಜಿಸಿದ್ದ ಬೀಳ್ಕೊಡುಗೆ ಸಮಾರಂಭದ ಅಧ್ಯಕ್ಷತೆವಹಿಸಿ ಅವರು ಮಾತನಾಡುತ್ತಿದ್ದರು.

ಬಡ್ತಿ ಪ್ರಕರಣಗಳು ಯಾವುದೇ ಕಾರಣಕ್ಕೂ ವಿಳಂಬವಾಗಬಾರದು ಎಂಬುದು ತಮ್ಮ ವೈಯುಕ್ತಿಕ ನಿಲುವು. ಆದಕಾರಣ, ಬಡ್ತಿಗೆ ಅರ್ಹತೆ ಇರುವವರಿಗೆ ಬಡ್ತಿ ನೀಡಲು ಆಧ್ಯತೆಯ ಮೇರೆಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುವುದು. ಆದರೆ, ಹುದ್ದೆ ಖಾಲಿ ಇಲ್ಲದಿರುವಾಗ ವರ್ಗಾವಣೆ ಪ್ರಕರಣಗಳನ್ನು ಕೂಡಲೇ ಇತ್ಯರ್ಥಪಡಿಸಲು ಸಾಧ್ಯವಾಗುವುದಿಲ್ಲ. ಇಂತಹ ಪ್ರಕರಣಗಳಲ್ಲಿ ವೈಯುಕ್ತಿಕ ಹಿತಾಸಕ್ತಿಗಿಂತಲೂ ಸಾರ್ವಜನಿಕ ಹಿತಾಸಕ್ತಿ ಮುಖ್ಯ ಎಂಬುದನ್ನು ಅಧಿಕಾರಿ ಮತ್ತು ನೌಕರರು ಗಮನದಲ್ಲಿರಿಸಿಕೊಂಡು ಮನವಿಗಳನ್ನು ಸಲ್ಲಿಸಬೇಕು ಎಂದು ಕಿವಿಮಾತು ಹೇಳಿದರು.

ತಮ್ಮನ್ನು ಆತ್ಮೀಯವಾಗಿ ಬೀಳ್ಕೊಟ್ಟ ಸಹೋದ್ಯೋಗಿಗಳಿಗೆ ಧನ್ಯವಾದ ಅರ್ಪಿಸಿದ ಪಿ ಎಂ ಚಂದ್ರಮೌಳೀಶ್ವರ ಸ್ವಾಮಿ ಅವರು ಇಲಾಖೆಯಲ್ಲಿನ ತಮ್ಮ ಸೇವಾ ಪಯಣವನ್ನು ಸ್ಮರಿಸಿದರಲ್ಲದೆ ಇಲಾಖೆ ಪ್ರವೇಶಿಸಿದ ಹೊಸತರಲ್ಲಿದ್ದ ಶಿಸ್ತು ಮತ್ತು ಶಿಷ್ಟಾಚಾರದ ಪರಿಕಲ್ಪನೆಯ ಮೆಲುಕು ಹಾಕಿದರು.

ಜಂಟಿ ನಿರ್ದೇಶಕರಾದ ಹೆಚ್ ಬಿ ದಿನೇಶ್ ಮತ್ತು ಬಸವರಾಜ್ ಎಂ ಕಂಬಿ ಅವರೂ ಒಳಗೊಂಡಂತೆ ಇಲಾಖೆಯ ಹಿರಿ–ಕಿರಿ ಅಧಿಕಾರಿಗಳು ಸಮಾರಂಭದಲ್ಲಿ ಹಾಜರಿದ್ದರು.

## ಐ ಎಂ ಎ ಹಗರಣ : ಠೇವಣಿದಾರರ ಹಿತರಕ್ಷಣೆಗೆ ಸಕ್ಷಮ ಪ್ರಾಧಿಕಾರ ನೇಮಕ

ಬೆಂಗಳೂರು, ಜುಲೈ 31 ( ಕರ್ನಾಟಕ ವಾರ್ತೆ)

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿನ ಠೇವಣಿದಾರರ ಹಿತರಕ್ಷಣಾ ಕಾಯ್ದೆ 2004 (**Karnataka Protection of Interest of Depositors in Financial Establishments act -2004**) ರ ಕಲಂ 5 ರಡಿಯಲ್ಲಿ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ಇವರನ್ನು ಹಣಕಾಸು ಸಂಸ್ಥೆಯಾದ ಐ.ಎಂ.ಎ. ಮತ್ತು ಇದರ ಅಧೀನ ಸಂಸ್ಥೆಗಳಿಂದ ನಡೆದಿರುವ ಹಣಕಾಸು ವಂಚನೆ ಪ್ರಕರಣದ ಸಂಬಂಧ ಸಕ್ಷಮ ಪ್ರಾಧಿಕಾರಿಯಾಗಿ ನೇಮಿಸಲಾಗಿರುತ್ತದೆ.

ಸಕ್ಷಮ ಪ್ರಾಧಿಕಾರಿಯ ಮುಖ್ಯ ಕರ್ತವ್ಯಗಳಲ್ಲಿ ಮೊದಲನೆಯದಾಗಿ ಸಂಬಂಧಪಟ್ಟ ಹಣಕಾಸು ಸಂಸ್ಥೆಯು ಹೊಂದಿರುವಂತಹ ಹಣ ಮತ್ತು ಆಸ್ತಿಗಳನ್ನು ಗುರುತಿಸುವುದು ಹಾಗೂ ಇವುಗಳನ್ನು ಭೌತಿಕವಾಗಿ ಸರ್ಕಾರದ ಸ್ವಾಧೀನಕ್ಕೆ ಪಡೆಯಲು ಸೂಕ್ತ ಕ್ರಮ ಜರುಗಿಸಿ ಠೇವಣಿದಾರರ ಹಿತಾಸ್ತಕಿಯನ್ನು ಕಾಪಾಡುವುದು ಆಗಿರುತ್ತದೆ.

ಈ ಸಂಬಂಧ ಸಾರ್ವಜನಿಕರಿಗೆ ಕೇಳಿಕೊಳ್ಳುವುದೇನೆಂದರೆ ಪ್ರಕರಣದ ಮುಖ್ಯ ಆರೋಪಿಯಾದ ಮೊಹಮದ್ ಮನ್ಸೂರ್‌ಖಾನ್ ಮತ್ತು ಇವರ ಕುಟುಂಬ ಸದಸ್ಯರುಗಳು ಹೊಂದಿರುವ ಸ್ಥಿರಾಸ್ತಿ ಮತ್ತು ಬೇನಾಮಿ ಆಸ್ತಿಗಳ ಬಗ್ಗೆ ಮಾಹಿತಿ ಇದ್ದಲ್ಲಿ, ಆಸ್ತಿಗಳ ವಿವರಗಳ ಮಾಹಿತಿಗಳನ್ನು ಈ ವಿಳಾಸಕ್ಕೆ ಅಂದರೆ ಪ್ರಾದೇಶಿಕ ಆಯುಕ್ತರು ಹಾಗೂ ಸಕ್ಷಮ ಪ್ರಾಧಿಕಾರ, **IMA**, ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿನ ಠೇವಣಿದಾರರ ಹಿತರಕ್ಷಣಾ ಕಾಯ್ದೆ 2004 (**Karnataka Protection of Interest of Depositors in Financial Establishments Act**) ಬೆಂಗಳೂರು ವಿಭಾಗ, 2ನೇ ಮಹಡಿ, ಬಿ.ಎಂ.ಟಿ.ಸಿ. ಕಟ್ಟಡ, ಕೆ.ಹೆಚ್. ರಸ್ತೆ, ಶಾಂತಿನಗರ – 560 027 ವಿಳಾಸಕ್ಕೆ ಅಂಚೆ ಮೂಲಕ ಅಥವಾ ಇ–ಮೇಲ್ ವಿಳಾಸ rcb27bangalore@gmail.com ಅಥವಾ ವಾಟ್ಸಪ್ ಸಂಖ್ಯೆ: 9886205240 ಕ್ಕೆ ಕಳುಹಿಸಬಹುದಾಗಿದೆ ಎಂದು ಆಯುಕ್ತರು ಬೆಂಗಳೂರು ವಿಭಾಗ ಮತ್ತು ಸಕ್ಷಮ ಪ್ರಾಧಿಕಾರಿ, ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿನ ಠೇವಣಿದಾರರ ಹಿತರಕ್ಷಣಾ ಕಾಯ್ದೆ–2004 ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದ ವರ್ಗಾವಣೆ ಕೌನ್ಸಿಲಿಂಗ್ ಮೂಲಕ

ಬೆಂಗಳೂರು, ಜುಲೈ 31 ( ಕರ್ನಾಟಕ ವಾರ್ತೆ)

2018–19 ನೇ ಸಾಲಿನ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದ ವರ್ಗಾವಣೆಗಳನ್ನು ಗಣಕೀಕೃತ ಕೌನ್ಸಿಲಿಂಗ್ ಮೂಲಕ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಅವರು ಸುತ್ತೋಲೆ, ಜ್ಞಾಪನ, ಮಾರ್ಗಸೂಚಿಗಳನ್ನು ಹೊರಡಿಸಿದ್ದಾರೆ.

ದಿನಾಂಕ 28–07–209 ರಂದು ಅಂತಿಮ ಆಧ್ಯತಾ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಸದರಿ ಪಟ್ಟಿಯಲ್ಲಿರುವ ಶಿಕ್ಷಕುಗಳಿಗೆ ಈ ಕೆಳಕಂಡ ದಿನಾಂಕಗಳಂದು ಬಿ.ಆರ್.ಸಿ. ಕೇಂದ್ರ, ಬೆಂಗಳೂರು ದಕ್ಷಿಣ ವಲಯ–01 ಟಿನ್ ಶಾಲೆ ಆವರಣ, ಬಸವನಗುಡಿ, ಬೆಂಗಳೂರು ಇಲ್ಲಿ ಕೌನ್ಸಿಲಿಂಗ್ ನಡೆಸಲಾಗುವುದು. ಸದರಿ ಕೌನ್ಸಿಲಿಂಗ್‌ಗೆ ಹಾಜರಾಗುವ ಶಿಕ್ಷಕರು ವರ್ಗಾವಣೆ ಅರ್ಜಿ ಜೊತೆಗೆ ಮೂಲ ದಾಖಲೆಗಳೊಂದಿಗೆ ನಿಗಧಿತ ದಿನಾಂಕ ಮತ್ತು ಸಮಯದಂದು ಹಾಜರಾಗಲು ತಿಳಿಸಿದೆ.

ಆಗಸ್ಟ್ 1 ರಂದು ಗುರುವಾರ ಸಹಶಿಕ್ಷಕರು 1 ರಿಂದ 100 ಸಂಖ್ಯೆ ಬೆಳಿಗ್ಗೆ 10.30 ಗಂಟೆಯಿಂದ, ಆಗಸ್ಟ್ 2 ರಂದು ಶುಕ್ರವಾರ ಸಹಶಿಕ್ಷರು 101 ರಿಂದ 300 ಬೆಳಿಗ್ಗೆ 10.30 ಗಂಟೆಯಿಂದ, ಆಗಸ್ಟ್ 3 ರಂದು ಶನಿವಾರ ಸಹಶಿಕ್ಷರು 301 ರಿಂದ 500 ಬೆಳಿಗ್ಗೆ 10.30 ಗಂಟೆಯಿಂದ, ಆಗಸ್ಟ್ 5 ರಂದು ಸೋಮವಾರ ಸಹಶಿಕ್ಷಕರು 501 ರಿಂದ 600 ಬೆಳಿಗ್ಗೆ 10.30 ಗಂಟೆಯಿಂದ, ಆಗಸ್ಟ್ 6 ರಂದು ಮಂಗಳವಾರ ಸಹಶಿಕ್ಷರು 601 ರಿಂದ 700 ಬೆಳಿಗ್ಗೆ 10.30 ಗಂಟೆಯಿಂದ, ಆಗಸ್ಟ್ 7 ರಂದು ಬುಧವಾರ ಸಹಶಿಕ್ಷಕರು 701 ರಿಂದ 769 ಬೆಳಿಗ್ಗೆ 10.30 ಗಂಟೆಯಿಂದ ಹಾಗೂ ಮುಖ್ಯ ಶಿಕ್ಷಕರು 1 ರಿಂದ 20 ಹಾಗೂ, ದೈಹಿಕ ಶಿಕ್ಷಕರು 1 ರಿಂದ 14 ಬೆಳಿಗ್ಗೆ 10.30 ಗಂಟೆಯಿಂದ ಕೌನ್ಸಿಲಿಂಗ್ ನಡೆಯಲಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಅವಧಿ ವಿಸ್ತರಣೆ

ಬೆಂಗಳೂರು, ಜುಲೈ 31 ( ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಯುಜಿಸಿ ಮಾನ್ಯತೆಯೊಂದಿಗೆ ವಿವಿಧ ಶೈಕ್ಷಣಿಕ ಕೋರ್ಸ್‌ಗಳ 2019–20 ನೇ ಸಾಲಿನ ಪ್ರವೇಶಾತಿಗೆ ದಿನಾಂಕ: 25–07–2019 ರವರೆಗೆ ದಂಡ ಶುಲ್ಕವಿಲ್ಲದೆ ಅಂತಿಮ ದಿನಾಂಕವಾಗಿ ಪ್ರಕಟಿಸಲಾಗಿತ್ತು.

ವಿಶ್ವವಿದ್ಯಾನಿಲಯದ ಕುಲಪತಿಗಳು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ದಂಡ ಶುಲ್ಕವಿಲ್ಲದೆ ಪ್ರವೇಶಾತಿ ಅವಧಿಯನ್ನು ಆಗಸ್ಟ್ 21, 2019 ರವರೆಗೆ ವಿಸ್ತರಿಸಲಾಗಿದೆ. ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕಾಗಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಹೆಬ್ಬಾಳ ಇದರ ಪ್ರಾದೇಶಿಕ ಕೇಂದ್ರದ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ 9880526439 ಮತ್ತು 080–23513730 ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸಬಹುದಾಗಿದೆ.

**66 ಪೊಲೀಸ್ ಅಧಿಕಾರಿಗಳಿಗೆ ರಾಷ್ಟ್ರಪತಿಗಳ ಸೇವಾ ಪದಕ ಪ್ರದಾನ**

**ಬೆಂಗಳೂರು, ಜುಲೈ 31 ( ಕರ್ನಾಟಕ ವಾರ್ತೆ) :**

ದುಷ್ಟ ಶಕ್ತಿಗಳನ್ನು ಮಟ್ಟಹಾಕುವಲ್ಲಿ ಪೊಲೀಸ್ ಅಧಿಕಾರಿಗಳ ಸನ್ನದ್ದರಾಗಬೇಕೆಂದು ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಅವರು ಇಲ್ಲಿ ಇಂದು ತಿಳಿಸಿದರು.

ರಾಜಭವನದಲ್ಲಿ ಆಯೋಜಿಸಿದ್ದ ಪೊಲೀಸ್ ಪದಕ ಪ್ರದಾನ ಸಮಾರಂಭದಲ್ಲಿ ಮಾತನಾಡುತ್ತಿದ್ದ ಅವರು ರಾಜ್ಯ ಪೊಲೀಸ್ ಇಲಾಖೆ ಇತರ ರಾಜ್ಯಗಳ ಮಾದರಿ ಇಲಾಖೆಯಾಗಿ ಹೊರಹೊಮ್ಮಬೇಕು. ಮಾಹಿತಿ ತಂತ್ರಜ್ಞಾನ, ಸಾಮಾಜಿಕ ಜಾಲತಾಣಗಳನ್ನು ಬಳಸಿ ಜನಸ್ನೇಹಿಯಾಗಿ ಇಲಾಖೆ ಕಾರ್ಯ ನಿರ್ವಹಿಸಬೇಕು. ಸರ್ಕಾರದ ಹೆಸರಿಗೆ ಚ್ಯುತಿ ಬಾರದ ರೀತಿಯಲ್ಲಿ ಪೊಲೀಸರು ನಡೆದುಕೊಳ್ಳಬೇಕು ಎಂದರು.

ಅಲ್ಲದೆ, 2016 ನೇ ಸಾಲಿನ ಸ್ವಾತಂತ್ಯ ದಿನಾಚರಣೆಯ ಸಂದರ್ಭದಲ್ಲಿ ರಾಷ್ಟ್ರಪತಿಗಳ ಸೇವಾ ಪದಕ ಪಡೆದ 66 ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗಯನ್ನು ಅವರು ತುಂಬು ಹೃದಯದಿಂದ ಅಭಿನಂದಿಸಿದರು. ನಂತರ ಮುಖ್ಯಮಂತ್ರಿ ಹಾಗೂ ರಾಜ್ಯಪಾಲರು 66 ಪದಕ ಪಡೆದ ವಿಜೇತರಲ್ಲಿ ರಾಜ್ಯಪಾಲರು ಎಂಟು ಮಂದಿ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ವಿಶಿಷ್ಟ ಸೇವಾ ಪದಕ 54 ಮಂದಿಗೆ ಕೇಂದ್ರ ಗೃಹ ಮಂತ್ರಿಗಳ ಶ್ಲಾಘನೀಯ ಸೇವಾ ಪದಕ, ನಾಲ್ಕು ಮಂದಿಗೆ ಪೊಲೀಸ್ ತರಬೇತಿ ಶ್ರೇಷ್ಠ ಪದಕ ವಿತರಿಸಿದರು.

ರಾಜ್ಯಪಾಲ ವಜುಭಾಯಿ ವಾಲಾ ಅವರು ಮಾತನಾಡಿ ಪ್ರಾಮಾಣಿಕ ಹಾಗೂ ನಿಷ್ಠಾವಂತ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗೆ ಸಮಾಜದಲ್ಲಿ ಉತ್ತಮ ಸ್ಥಾನ ಲಭಿಸುತ್ತದೆ. ಪೊಲೀಸರು ಸದಾ ಜನರ ರಕ್ಷಣೆಯಲ್ಲಿ ತೊಡಗಬೇಕು. ಸಮಾಜದಲ್ಲಿ ಜನರು ಪೊಲೀಸರನ್ನು ಶ್ಲಾಘಿಸಿದರೆ ಅದೇ ನಿಜವಾದ ಪ್ರಶಸ್ತಿ ಇದ್ದಂತೆ. ಕಾನೂನು ಜನರ ರಕ್ಷಣೆಯೇ ಇಲಾಖೆಯ ಆದ್ಯ ಕರ್ತವ್ಯ. ಪೊಲೀಸರು ಇನ್ನೂ ಹೆಚ್ಚಿನ ಕೆಲಸ ನಿರ್ವಹಿಸಿ ಎಲ್ಲರ ಪ್ರಶಂಸೆಗೆ ಪಾತ್ರರಾಗಬೇಕು ಎಂದು ಆಶಿಸಿದರು.

ಗೃಹ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಾದ ರಜನೀಶ್ ಗೋಯಲ್, ಪೊಲೀಸ್ ಮಹಾ ನಿರ್ದೇಶಕರಾದ ನೀಲಮಣಿ ಎನ್. ರಾಜು ಅವರು ಈ ಸಮಾರಂಭದಲ್ಲಿ ಉಪಸ್ಥಿತರಿದ್ದರು.

# Press release

## I M A SCAM : COMPTENT AUTHORITY APPOINTED TO PROTECT THE INTERESTS OF DEPOSITORS

**Bengaluru, July 31 (Karnataka Information)**

**Under Section 5 of the Karnataka Protection of Interest of Depositors in Financial Establishments Act, 2004 the Regional Commissioner, Bengaluru has been appointed as the Competent Authority vis- a vis the fraud perpetrated by the financial establishment I Monetary Advisory (IMA) and its allied concerns. One of the main functions of the Competent Authority is to identify and take all such necessary action for physical possession of all the monies and the assets of the concerned fraudulent financial establishment expeditiously so that the interest of the depositors are protected. This is a notice calling upon members of the public to share any information regarding any moveable or immoveable property and assets owned by or under benami ownership of the main accused Mohammed Mansoor Khan or any of his family members. The details can be sent by post to the address Office of the Regional Commissioner, Bengaluru Division and Competent Authority under KPID Act, 2004, 2nd Floor, BMTC Building, K.H. Road, Shanthinagar, Bengaluru-560 027 or e-mail rcb27bangalore@gmail.com or whatsapp to the number 9886205240 says official press release issued by Regional Commissioner, Bengaluru Division and the Competent Authority (IMA) under KPID Act, 2004.**

ANNOUNCEMENT

**JAWAHAR NAVODAYA VIDYALAYA**
**BAGALUR – 562149 [Via Yelahanka]**
**BANGALORE URBAN DISTRICT- KARNATAKA**
**An autonomous organization under**
**Ministry of Human Resources Development,**
**(Dept of School Education & Literacy,**
**Government of India)**

## JAWAHAR NAVODAYA VIDYALAYA, DISTT:BANGALORE URBAN

## JAWAHAR NAVODAYA VIDYALAYA SELECTION TEST-2020

**The JNVST 2020 for admission to class VI for the academic year 2020-21 in Jawahar Navodaya Vidyalayas scheduled to be held on** Saturday 11th January 2020 at 11.15 am **The students who are studying in Class V for the academic year 2019-20 in Bangalore Urban District are eligible to appear for Exam.**

**This year the candidates have enrolled the applications through ONLINE and upload the duly filled in** CERTIFICATE **from the Head Master of School where the candidate is studying in Class V at the time of registration that can be downloaded from the NVS website www.navodaya.gov.in or www.nvsadmissionclasssix.in The last date for submission of Application form through online is 15th September 2019 for JNV Selection Test, 2020.**

**For more information visit to Samiti website www.navodaya.gov.in or contact Vidyalaya Phone No.080-28469055**

**PRINCIPAL**